1. ಕಾಳಿನದಿ ಯೋಜನೆ (2ನೇ ಹಂತ)
2. ಘಟಪ್ರಭಾ ಯೋಜನೆ
3. ಮಲ್ಲಾಪುರ ಮತ್ತು 4 ಇತರ ಸಣ್ಣ ಜಲವಿದ್ಯುತ್ ಯೋಜನೆಗಳು.

ಶರಾವತಿ ಟೇಲ್‌ರೇಸ್, ಶಿವಪುರ ವಿದ್ಯುತ್‌ಗಾರ ಯೋಜನೆ ಹಾಗೂ ರಾಯಚೂರು ಉಷ್ಣ ವಿದ್ಯುತ್ ಯೋಜನೆ (2ನೇ ಹಂತ)ಗಳ ಯೋಜನಾ ವರದಿಗಳನ್ನು ತಯಾರಿಸಿ ಕೇಂದ್ರ ವಿದ್ಯುತ್ ಪ್ರಾಧಿಕಾರ ಹಾಗೂ ಯೋಜನಾ ಆಯೋಗದ ಅನುಮತಿಗಾಗಿ ಕಳುಹಿಸಲಾಗಿದೆ.

ಇ) ಹೌದು.

ದಕ್ಷಿಣ ವಲಯದ ವಿದ್ಯುಚ್ಛಕ್ತಿ ಮಂತ್ರಿಗಳ ಸಭೆಯಲ್ಲಿ, ಕೇಂದ್ರ ವಿದ್ಯುಚ್ಛಕ್ತಿ ರಾಜ್ಯ ಮಂತ್ರಿಗಳ ಮುಂದೆ ಈ ವಿಷಯವನ್ನು ಒತ್ತಾಯಿಸಲಾಯಿತು.

ರೈತರಿಂದ ಸಹಕಾರ ಸಂಘಗಳ ಸಾಲವನ್ನು ವಸೂಲು ಮಾಡುವುದು

ಪ್ರಶ್ನೆ : 35 (73) ಶ್ರೀ. ಪಂಪಾಪತಿ (ದಾವಣಗೆರೆ) .— ಮಾನ್ಯಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ : —

ಅ) ಸರಕಾರದವರು ಸಹಕಾರಿ ಸಂಸ್ಥೆಗೆ ಸಾಲ ಮರುಪಾವತಿ ಬಗ್ಗೆ ತೋರಿಸಿದ ರಿಯಾಯಿತಿ ದೆಸೆಯಿಂದ ಎಷ್ಟು ಹಣ ರೈತರಿಂದ ಮರುಪಾವತಿಯಾಗಿದೆ;

ಆ) ಈ ರಿಯಾಯಿತಿ ಉಪಯೋಗ ಪಡೆದ ಪರಿಣಾಮವಾಗಿ ಶ್ರೀಮಂತ ರೈತರಿಂದ ಮರು ಪಾವತಿಯಾದ ಮೊಬಲಗು ಎಷ್ಟು;

ಇ) ಸಣ್ಣ ರೈತರಿಂದ ಮರುಪಾವತಿಯಾದ ಮೊಬಲಗು ಎಷ್ಟು;

ಈ) ಸಾಲ ಮರುಪಾವತಿ ಮಾಡದಿರುವವರಿಗೆ ಮತ್ತೆ ಕಾಲಾವಕಾಶ ಕೊಡಲಾಗುವದೆ ?

ಉತ್ತರ : ಆರ್. ಎಲ್. ಜಾಲಪ್ಪ (ಸಹಕಾರ ಸಚಿವರು) .— ಅ) ಒಟ್ಟು ರೂ. 118.97 ಕೋಟಿಯಷ್ಟು ವಸೂಲಿಯಾಗಿದೆ.

ಆ) ರೂ. 72.16 ಕೋಟಿ.

ಇ) ಸಣ್ಣ ಮತ್ತು ಅತಿ ಸಣ್ಣ ರೈತರಿಂದ ಮರುಪಾವತಿಯಾದ ಮೊಬಲಗು ರೂ. 46.81 ಕೋಟಿಗಳು.

ಈ) ಇಲ್ಲ.

ರೈತರಿಗೆ ಬಡ್ಡಿ, ಸುಸ್ತಿ ಬಡ್ಡಿ ವಿನಾಯಿತಿ

ಪ್ರಶ್ನೆ : 36 (80) ಶ್ರೀ. ಜಿ. ಎಸ್ ಬಸವರಾಜ (ಅರಸಿಕೆರೆ).— ಮಾನ್ಯಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

ಅ) ರಾಜ್ಯದ ರೈತರಿಗೆ ಜೂನ್ 30ನೇ ತಾರೀಖಿನೊಳಗೆ ಸಾಲ ಮರುಪಾವತಿ ಮಾಡಿದವರಿಗೆ ಬಡ್ಡಿ ಸುಸ್ತಿ ಬಡ್ಡಿ ವಿನಾಯಿತಿ ಘೋಷಿಸಿರುವುದು ನಿಜವೆ ;

ಆ) ರಾಜ್ಯದ 16 ಜಿಲ್ಲೆಗಳು ಬರಗಾಲ ಪ್ರದೇಶವೆಂದು ಸರ್ಕಾರ ಘೋಷಿಸಿರುವುದು ನಿಜವೇ ;

ಇ) ಹಾಗಿದ್ದಲ್ಲಿ ಜೂನ್ 30ನೇ ತಾರೀಖು ಸಾಲ ವಾಪಸಾತಿಗೆ ಗಡುವು ಮಾಡಿರುವುದರಿಂದ ರೈತರಿಗೆ ತೊಂದರೆಯಾಗಿದೆಯಿಲ್ಲವೇ ?

ಉತರ : ಆರ್. ಎಲ್. ಜಾಲಪ್ಪ : (ಸಹಕಾರ ಸಚಿವರು) .—ಅ) ಹೌದು 1) 30-6-1982 ರಂದು ಸುಸ್ತಿದಾರ ರಾಗಿದ್ದು 30-6-83ರ ಒಳಗೆ ಸಾಲ ತೀರಿಸಿದವರಿಗೆ 30-6-82ರ ಸುಸ್ತಿ ಸಾಲದ ಮೇಲಿನ ಪೂರ್ಣ ಬಡ್ಡಿ, ಸುಸ್ತಿ ಬಡ್ಡಿಯನ್ನು ಸರಕಾರ ರೈತರ ಪರವಾಗಿ ತುಂಬುತ್ತಿದೆ. ಆದ್ದರಿಂದ ರೈತರ ಬಗ್ಗೆ ಹೇಳುವುದಾದರೆ 30-6-82 ರಂದಿದ್ದ ಸುಸ್ತಿ ಸಾಲದ ಹಣ 30-6-83ರ ಒಳಗೆ ಪೂರ್ತಿ ಪಾವತಿ ಮಾಡಿದ್ದಲ್ಲಿ ಆ ಸಾಲದ ಮೇಲಿನ ಬಡ್ಡಿಯನ್ನು ರೈತರು ಕೊಡಬೇಕಾದ್ದಿಲ್ಲ.

2) ಚಾಲ್ತಿ ಸಾಲವನ್ನು 30-6-83ರ ಒಳಗೆ ಕಟ್ಟಿದವರಿಗೆ ಶೇ. 5 ರಿಂದ 5 1/2 ಯಷ್ಟು ಬಡ್ಡಿ ರಿಯಾಯಿತಿಯನ್ನು ಕೊಡಲಾಗಿದೆ. ಆ ರಿಯಾಯಿತಿ ಹಣವನ್ನು ಸರಕಾರ ಸಬ್ಸಿಡಿ ರೂಪದಲ್ಲಿ ತುಂಬುತ್ತಿದೆ.

ಆ) 16 ಜಿಲ್ಲೆಗಳಲ್ಲಿ ಅಭಾವ ಪೀಡಿತ ಪರಿಸ್ಥಿತಿ ಇದೆಯೆಂದು ಸರ್ಕಾರ ಪರಿಗಣಿಸಿದೆ.

ಇ) ಇಲ್ಲ. ಏಕೆಂದರೆ ಸಹಕಾರಿ ಸಾಲಗಳನ್ನು ಅವಶ್ಯವಿದ್ದೆಡೆಗಳಲ್ಲಿ ಪರಿವರ್ತಿಸಲು ಅಥವಾ ಕಂತುಗಳ ಪುನರ್ನಿಗದಿ ಮಾಡಲು ಅವಕಾಶ ಮಾಡಿಕೊಡಲಾಗಿದೆ.

ರಾಜ್ಯದಲ್ಲಿ ಸಹಕಾರ ಸಂಘಗಳಿಂದ ರೈತರು ಪಡೆದ ಸಾಲ

ಪ್ರಶ್ನೆ : 37 (19) ಶ್ರೀ. ಕೆ. ಹೆಚ್ ಕುರದಗಿ : (ಮುಂಡರಗಿ) .—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

ಅ) ರಾಜ್ಯದಲ್ಲಿ ಸಹಕಾರಿ ಸಂಘ ಸಂಸ್ಥೆಗಳಿಂದ ರೈತರು ಪಡೆದ ಸಾಲದ ಮೇಲೆ ಬಡ್ಡಿ ವಜಾ

ಮಾಡಿದ್ದು ನಿಜವೇ ;

ಆ) ಹಾಗಿದ್ದಲ್ಲಿ ಎಷ್ಟು ಬಡ್ಡಿ ಹಣವನ್ನು ಮನ್ನಾ ಮಾಡಲಾಗಿದೆ;

ಇ) ರೈತರು ಬ್ಯಾಂಕ್‌ಗಳಿಂದ ಪಡೆದ ಸಾಲದ ಮೇಲೆ ಬಡ್ಡಿಯನ್ನು ಮನ್ನಾ ಮಾಡುವ ಯೋಜನೆ ಸರಕಾರಕ್ಕೆ ಇದೆಯೇ;

ಈ) ಹಾಗಿದ್ದಲ್ಲಿ ಕಾರಣವೇನು ?

ಉತ್ತರ : ಆರ್ ಎಲ್. ಜಾಲಪ್ಪ .— ಆ) ಹೌದು. 1) 30-6-1982ರಂದು ಸುಸ್ತಿದಾರರಾಗಿದ್ದು 30-6-83ರ ಒಳಗೆ ಸಾಲ ತೀರಿಸಿದವರಿಗೆ 30-6-82ರ ಸುಸ್ತಿ ಸಾಲದ ಮೇಲಿನ ಪೂರ್ಣ ಬಡ್ಡಿ, ಸುಸ್ತಿ ಬಡ್ಡಿಯನ್ನು ಸರಕಾರ ರೈತರ ಪರವಾಗಿ ತುಂಬುತ್ತದೆ. ಆದ್ದರಿಂದ ರೈತರ ಬಗ್ಗೆ ಹೇಳುವುದಾದರೆ 30-6-82 ರಂದಿದ್ದ ಸುಸ್ತಿ ಸಾಲದ ಹಣ 30-6-83ರ ಒಳಗೆ ಪೂರ್ತಿ ಪಾವತಿ ಮಾಡಿದ್ದಲ್ಲಿ ಆ ಸಾಲದ ಮೇಲಿನ ಬಡ್ಡಿಯನ್ನು ರೈತರು ಕೊಡಬೇಕಾದ್ದಿಲ್ಲ.

2) ಚಾಲ್ತಿ ಸಾಲವನ್ನು 30-6-83ರ ಒಳಗೆ ಕಟ್ಟಿದವರಿಗೆ ಶೇ. 5ರಿಂದ 5 1/2 ಯಷ್ಟು ಬಡ್ಡಿ ರಿಯಾಯಿತಿ ಹಣವನ್ನು ಸರಕಾರ ಸಬ್ಸಿಡಿ ರೂಪದಲ್ಲಿ ತುಂಬುತ್ತಿದೆ.

ಆ) ಬಡ್ಡಿ ರಿಯಾಯಿತಿಯನ್ನು ಕೊಡಲಾಗಿದೆ. ಆ ರಿಯಾಯಿತಿ ಹಣವನ್ನು ಸರಕಾರ ಸಬ್ಸಿಡಿ ರೂಪದಲ್ಲಿ ತುಂಬುತ್ತಿದೆ.

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

ಗೊಂದಲ

ಅಧ್ಯಕ್ಷರು.— ಶ್ರೀ ಪಂಪಾಪತಿಯವರು ಈ ಸದನದ ಹಿರಿಯ ಸದಸ್ಯರು. ಅವರುಗಳು ಮಾಡಿದ ಕಾಯಿದೆ ಇದು. ನಾನು ಕೂಡ ಇಲ್ಲಿಗೆ ಹೊಸಬ. ಈಗ ಇರತಕ್ಕಂಥ ಕಾಯಿದೆಯ ವ್ಯಾಪ್ತಿಯಲ್ಲಿ ನಾನು ಕೆಲಸ ಮಾಡಬೇಕೆಂದು ಹೇಳಿದ್ದೀರಿ. ಅದರಂತೆ ನಾನು ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ಶ್ರೀ ಪಂಪಾಪತಿ.— ಪ್ರಶ್ನೆಗಳ ಪಟ್ಟಿಯಲ್ಲಿ 17 ಪ್ರಶ್ನೆಗಳನ್ನು ಹಾಕಿರುತ್ತೀರಿ. ಒಂದು ಗಂಟೆ ಅವಧಿಯೊಳಗೆ ಇಷ್ಟು ಪ್ರಶ್ನೆಗಳು ಮುಗಿಯಬೇಕೆಂದರೆ ಅದು ಹೇಗೆ ಸಾಧ್ಯವಾಗುತ್ತದೆ ? ರೈತರಿಗೆ ಸಂಬಂಧಪಟ್ಟಿರುವ ಬಹಳ ಮುಖ್ಯವಾದ ಪ್ರಶ್ನೆ ಇದೆ ಸ್ವಾಮಿ.

ಅಧ್ಯಕ್ಷರು.— ಇದನ್ನು ನಾನು ಕೂಡ ಒಪ್ಪುತ್ತೇನೆ. ಆದರೆ ಇದು ನನ್ನ ವ್ಯಾಪ್ತಿಯೊಳಗಿಲ್ಲ.

ಶ್ರೀ ಪಿ. ರಾಮ್‌ದೇವ್.— ಮಾನ್ಯ ಅಧ್ಯಕ್ಷರೇ, ತಮ್ಮ ಅಧಿಕಾರ ವ್ಯಾಪ್ತಿಯ ಬಗ್ಗೆ ಸಂಬಂಧಿಸಿದಂತೆ ನನ್ನದೊಂದು ಕ್ರಿಯಾಲೋಪ ಇದೆ. 333ನೇ ನಿಯಮದ ಪ್ರಕಾರ ನಾನು ಕ್ರಿಯಾಲೋಪ ಎತ್ತುತ್ತಿದ್ದೇನೆ. ರೂಲ್ಸ್ ಆಫ್ ಪ್ರೊಸೀಜರ್ ನಂ. 37ನೇ ನಿಯಮದಲ್ಲಿ ಹೀಗೆ ಹೇಳಿದೆ : —

Unless the Speaker otherwise directs the first hour of every day of sitting shall be available for the asking and answering of questions.

ಆದ್ದರಿಂದ ಈ ಒಂದು ಅಧಿಕಾರ ತಮಗೆ ಇದೆ.

Mr Speaker : I do not have such powers.

ಶ್ರೀ ಪಿ. ರಾಮ್‌ದೇವ್.— ತಾವು ಇದನ್ನು ಮುಂದುವರೆಸಲಿಕ್ಕೆ ಅಧಿಕಾರ ಇದೆ. 42ನೇ ನಿಯಮದಲ್ಲಿ "Not more than one question distinguished it by asterisk by the same member and not more than twenty questions in all shall be placed on the list of questions for oral answer on any one day" ಹೀಗಿರುವಾಗ 20 ಪ್ರಶ್ನೆಗಳನ್ನು ಹೇಗೆ ಸೇರಿಸಿದ್ದೀರಿ ? ಒಂದು ಘಂಟೆ ಅವಧಿಯಲ್ಲಿ 10-12 ಪ್ರಶ್ನೆಗಳಿಗಿಂತ ಹೆಚ್ಚು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಇದು ತಮಗೂ ಗೊತ್ತಿದೆ. ಆದರೂ ಕೂಡ 20 ಪ್ರಶ್ನೆಗಳನ್ನು ಏಕೆ ನಮೂದಿಸಿದ್ದೀರಿ ? ನಮಗಿರತಕ್ಕಂಥ ಹಕ್ಕನ್ನು ರಕ್ಷಣೆ ಮಾಡುವುದು ತಮ್ಮ ಕರ್ತವ್ಯ. ಒಂದು ಗಂಟೆ ಅವಧಿಯಲ್ಲಿ ಪ್ರಶ್ನೋತ್ತರ ವೇಳೆ ಮುಗಿದು ಹೋಗುವಂತಿದ್ದರೆ ತಮಗೆ ಇರತಕ್ಕ ಅಧಿಕಾರದಲ್ಲಿ ಅದನ್ನು 10 ಪ್ರಶ್ನೆಗಳಿಗೆ ಮಾತ್ರ ಮಿತಿಗೊಳಿಸಬೇಕು. ಅದರಲ್ಲೂ ಕೂಡ ತಮಗೆ ಅಧಿಕಾರ ಇದೆ. ಬಹಳ ಕಷ್ಟಪಟ್ಟು ಒಂದು ಪ್ರಶ್ನೆ ಬಂದಿರುವಾಗ ಅದರ ಬಗ್ಗೆ ಮಾತನಾಡಲು ಅವಕಾಶ ಇಲ್ಲದೇ ಹೋದರೆ, ತಾವಲ್ಲದೆ ಇನ್ಯಾರು ನಮ್ಮ ರಕ್ಷಣೆಯನ್ನು ಮಾಡಬೇಕು ? ಪ್ರಶ್ನೋತ್ತರ ನಮ್ಮ ಅಮೂಲ್ಯವಾದ ಹಕ್ಕು. ನಮ್ಮ ಹಕ್ಕನ್ನು ಹೀಗೆ ಮೊಟಕು ಮಾಡುವುದು ಸರಿಯಲ್ಲ. ಈ ಎರಡು ವಿಷಯಗಳ ಮುಖಾಂತರ ನಾನು ಕ್ರಿಯಾಲೋಪ ಎತ್ತುತ್ತಿದ್ದೇನೆ

ಅಧ್ಯಕ್ಷರು.— ಹಳೆಯ ಸದಸ್ಯರಾದ ತಾವುಗಳು ಮಾಡಿದ ನಿರ್ಣಯ ಇದು. ನಾನೇನೂ ನಿಮ್ಮ ಹಕ್ಕುಗಳನ್ನು ಮೊಟಕು ಮಾಡುತ್ತಿಲ್ಲ.

ಗೊಂದಲ

ಶ್ರೀ ಎಂ ಎಸ್. ಕೃಷ್ಣನ್.— ನನ್ನದೊಂದು ಕ್ರಿಯಾಲೋಪವಿದೆ, ತಾವು ದಯವಿಟ್ಟು ಕೇಳ ಬೇಕು. ಅದೇನೆಂದರೆ ಶ್ರೀ ರಾಮ್‌ದೇವ್‌ರವರು ಹೇಳಿದ್ದನ್ನು ನಾನು ಸ್ವಲ್ಪ ವಿಸ್ತಾರ ಮಾಡಿ ಹೇಳ ಬೇಕಾಗಿದೆ ಈ ರೂಲ್ ನಂಬರ್ 37ರಲ್ಲಿ ಇರುವುದು ಏನೆಂದರೆ

"Unless the Speaker otherwise directs the first Hour of every day of sitting shall be available for asking and answering of questions"

You have got the right to direct but it need not be within one hour. It can also be more than one hour. Direction is a matter of discretion by you. It need not be interpreted as within one hour. You have the right to say that there is no question hour. That right you have got. It may also be that you have got the right to direct that the question hour be extended to 1 1/2 hour or so It is a matter of discretion that is given to you in these four words, "Unless the Speaker otherwise directs". My submission to you is, you use your discretion in favour of the members to extend the question hour till the time we are able to settle this on the basis of the report of the new Rules Committee. I would request you to be generous because there are number of new entrants in this House and there is also a number of qeuestions to be answered I also request yot to interpret this in favour of members. After all you are the custodian and the protecter of the interests of the Members. You are the highest to guard our interests. Our interest is to see that the questions are answered. ಜನಗಳು ಏನು ಹೇಳುತ್ತಾರೆ ಎಂಬುದನ್ನು ತಾವು ದಯವಿಟ್ಟು ತಿಳಿದುಕೊಳ್ಳಬೇಕು. ಏಕೆಂದರೆ ಇವು ಮುಖ್ಯವಾದ ಸಮಸ್ಯೆಗಳಾಗಿವೆ.

ಶ್ರೀ ವಿ. ಎಸ್. ಆಚಾರ್ಯ.— ಸದಸ್ಯರು ಕೇಳಬೇಕಾದ ಪ್ರಶ್ನೆಗಳು ಲಾಟರಿಯಲ್ಲಿ ಬರಬೇಕಾಗುತ್ತದೆ. ಹೀಗೆ ಬಂದ ಮೇಲೆ ಎಲ್ಲವನ್ನೂ ಗಣನೆಗೆ ತೆಗೆದುಕೊಳ್ಳುವುದು ಸೂಕ್ತ. ಇಪ್ಪತ್ತು ಪ್ರಶ್ನೆಗಳು ಇದ್ದರೆ ಅದರಲ್ಲಿ ಹತ್ತು ಪ್ರಶ್ನೆಗಳನ್ನು ಮಾತ್ರ ತೆಗೆದುಕೊಂಡ ಹನ್ನೊಂದೂವರೆ ಗಂಟೆಯವರೆಗೆ ಮಿತಿಯನ್ನು ವಿಧಿಸಿ ಎಲ್ಲಾ ಪ್ರಶ್ನೆಗಳಿಗೆ ಉತ್ತರ ಕೊಡುವ ವ್ಯವಸ್ಥೆಯಾದರೆ ಬಹಳ ಒಳ್ಳೆಯದು. ಇಲ್ಲದಿದ್ದರೆ ಬೇರೆ ಬೇರೆ ಪಕ್ಷಗಳ ನಾಯಕರನ್ನು ಕರೆಸಿ ಈ ಬಗ್ಗೆ ಮಾತನಾಡುವುದಾಗಿ ಮಾನ್ಯ ಸಭಾಧ್ಯಕ್ಷರು ಏನು ಭರವಸೆಯನ್ನು ಕೊಟ್ಟಿದ್ದಾರೆ. ಇದು ಒಂದು ತೀರ್ಮಾನಕ್ಕೆ ಬರುವತನಕ ಅಲ್ಲಿಯವರೆಗೆ ಪ್ರಶ್ನೆಗಳನ್ನು ಕೇಳುವುದಕ್ಕೇ ಅವಕಾಶವನ್ನು ಕೊಡಬಾರದು ಏಕೆಂದರೆ ಲಿಸ್ಟ್‌ನಲ್ಲಿ ಬಂದ ಪ್ರಶ್ನೆಗಳು ಹಾಗೆಯೇ ತಪ್ಪಿಹೋಗುವುದು ದುರ್ದೈವದ ಸಂಗತಿ. ಇದರಲ್ಲಿ ಅನೇಕ ಮುಖ್ಯವಾದ ಗಂಭೀರವಾದ ಪ್ರಶ್ನೆಗಳು ಇರುತ್ತವೆ ಗೇಣಿದಾರರಿಗೆ ಸಂಬಂಧಿಸಿದ ಪ್ರಶ್ನೆಗಳು ಇರುತ್ತವೆ. ಬಿಸಿನೆಸ್ ಅಡ್ವೈಸರಿ ಕಮಿಟಿಯು ಇದರ ಬಗ್ಗೆ ನಿಯಮಾವಳಿಯನ್ನು ಮಾಡಿಕೊಂಡು ಒಂದು ತೀರ್ಮಾನವಾಗುವವರೆಗೆ ಲಿಸ್ಟ್‌ನಲ್ಲಿ ಬಂದಿರತಕ್ಕ ಎಲ್ಲಾ ಪ್ರಶ್ನೆಗಳಿಗೂ ಅವಕಾಶವನ್ನು ಕೊಡಬೇಕು.

ಶ್ರೀ ಎಸ್. ಸೂರ್ಯನಾರಾಯಣರಾವ್ — ಇದು ಪ್ರತಿದಿನ ಉದ್ಭವಿಸುವ ಸಮಸ್ಯೆ. ಇದು ಎರಡೂ ಕಡೆಯ ಸದಸ್ಯರನ್ನು ಬಾಧಿಸುತ್ತಿರುವ ವಿಚಾರ. ನಾವು ಹೊಸಬರು, ಕಳೆದ ಅಧಿವೇಶನದಲ್ಲಿ ಈ ಪ್ರಶ್ನೆ ಉದ್ಭವಿಸಿರಲಿಲ್ಲ. ಹೆನ್ನೆರಡು ಗಂಟೆಗೆ ಸರಿಯಾಗಿ ಪ್ರಶ್ನೋತ್ತರ ಅವಧಿ ಮುಗಿಯ ಬೇಕೆಂದು, ಗಡಿಯಾರದ ಕಡೆಗೆ ಮಾನ್ಯ ಅಧ್ಯಕ್ಷರು ನೋಡುತ್ತಿರುವುದಾದರೆ ನಮಗೆ ಬಹಳ ಕಷ್ಟವಾಗುತ್ತದೆ. ಮಾತನಾಡುವವರು ಒಮ್ಮೊಮ್ಮೆ ಐದು ನಿಮಿಷ ಹೆಚ್ಚಾಗಿಯೇ ಮಾತನಾಡುತ್ತಾರೆ. ಸ್ವಲ್ಪ ರಿಯಾಯ್ತಿ ತೋರಿಸಬೇಕಾಗುತ್ತದೆ. ಒಂದು ಕಮಿಟಿಯನ್ನು ಮಾಡಿ ನಿಯಮಾವಳಿಯನ್ನು ಬದಲಾಯಿಸಿ ಅರ್ಧ ಗಂಟೆಯೋ. ಕಾಲು ಗಂಟೆಯೋ ಜಾಸ್ತಿ ಮಾಡಿ.

ಶ್ರೀ ಪಿ. ರಾಮ್‌ದೇವ್.— ತಮ್ಮಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ, ಏನೆಂದರೆ ಈ ಕ್ರಮವನ್ನು ಯಾರು ನಿರ್ಧರಿಸುತ್ತಾರೋ ಗೊತ್ತಿಲ್ಲ. ಸಾಮಾನ್ಯವಾಗಿ ನಾವು ಕೇಳುವ ಪ್ರಶ್ನೆಗಳು ಕೊನೆಯಲ್ಲಿಯೇ ಬರುತ್ತವೆ ಏಕೆ ? ಪ್ರಶ್ನೆಗಳನ್ನು ಬ್ಯಾಲೆಟ್‌ನಲ್ಲಿ ಹಾಕಿಲ್ಲವೆಂದು ತಾವು ಹೇಳುತ್ತಿದ್ದೀರಿ.

ಅಧ್ಯಕ್ಷರು.— ಹಾಗಿದ್ದ ಪಕ್ಷದಲ್ಲಿ ನಾನು ನೋಡುತ್ತೇನೆ.

ಶ್ರೀ ಪಿ. ರಾಂದೇವ್.— ತಾವು ಬೇಕಾದರೆ ತಾರೀಕನ್ನು ತೆಗೆದು ನೋಡಿರಿ. ನಮ್ಮ ಹಕ್ಕಿನ ರಕ್ಷಣೆಯನ್ನು ತಾವು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ

ಶ್ರೀ ಬಿ ಬೈರಪ್ಪಾಜಿ — 1962ರಲ್ಲಿ ಶ್ರೀ ವೈಕುಂಠ ಬಾಳಿಗಾ ಅವರು ಇದ್ದರು ಅವರು ಸ್ಪೀಕರ್ ಆಗಿದ್ದ ಅವಧಿಯಲ್ಲಿ ಕಾಲು ಗಂಟೆ. ಅರ್ಧಗಂಟೆ ಕಾಲ ಸ್ವಲ್ಪ ಕಾಲಾವಕಾಶವನ್ನು ಕೊಡುತ್ತಿದ್ದರು. ನಂತರ ಶ್ರೀಮತಿ ನಾಗರತ್ನಮ್ಮನವರು ಕೂಡ ಸ್ವಲ್ಪ ಹೆಚ್ಚು ಕಾಲಾವಕಾಶವನ್ನು ಕೊಡುತ್ತಿದ್ದರು

ಅಧ್ಯಕ್ಷರು.— ಈಗ ಎರಡೂ ಕಡೆಯವರು ಒಪ್ಪಿಕೊಂಡರೆ ನನ್ನ ಕೆಲಸ ಸ್ವಲ್ಪ ಸುಲಭವಾಗುತ್ತದೆ

ಶ್ರೀ ಎಸ್.ಆರ್. ಬೊಮ್ಮಾಯಿ.— ಈ ವಿಷಯ ಅನೇಕ ಸಲ ಚರ್ಚೆಗೆ ಬರುತ್ತಿದೆ. ಹಿಂದೆ ಈ ಸಭೆಯು ಲೋಕಸಭೆಯ ನಿಯಮಾವಳಿಯನ್ನು ಅಳವಡಿಸಿಕೊಳ್ಳುವ ಮೊದಲು ಕೂಡ ಅನೇಕ ಜನ ಸದಸ್ಯರು ಪ್ರಶ್ನೆಗಳನ್ನು ಕೇಳಿದಾಗ ಉತ್ತರಗಳೇ ಬರುತ್ತಿರಲಿಲ್ಲ ಕೆಲವು ಸಲ ಅವರ ಅವಧಿ ಮುಗಿದು ಹೋದರು ಕೂಡ ಅನೇಕ ಪ್ರಶ್ನೆಗಳಿಗೆ ಉತ್ತರ ಬರುತ್ತಿರಲಿಲ್ಲ

ಶ್ರೀಪಂಪಾಪತಿ.—ಮಾನ್ಯ ಬೊಮ್ಮಾಯಿಯವರು ವಿರೋಧಪಕ್ಷದ ನಾಯಕರಾಗಿದ್ದಾಗ 2ಗಂಟೆ ಕಾಲ ಮಾತನಾಡುತ್ತಿದ್ದರು. ಈಗ ಏತಕ್ಕೆ ಹೀಗೆ ಮಾಡುತ್ತಿದ್ದಾರೆ

ಶ್ರೀ ಎಸ್ ಆರ್ ಬೊಮ್ಮಾಯಿ.—ಹೊಸ ನಿಯಮಗಳ ಪ್ರಕಾರ ಪ್ರಶ್ನೆಗಳಿಗೆ ತಕ್ಷಣ ಉತ್ತರ ಕೊಡಬೇಕು. ಮಾಹಿತಿ ಬರಲಿ ಬಿಡಲಿ ಸರ್ಕಾರ ಉತ್ತರ ಕೊಡಬೇಕು. ಲೋಕಸಭೆ ನಿಯಮಾವಳಿಗಳನ್ನು ಅನುಸರಿಸುತ್ತಿರುವುದರಿಂದ ಅನುಕೂಲವಾಗಿದೆ. ನಾವು ಆ ನಿಯಮಗಳನ್ನು ಒಪ್ಪಿಕೊಂಡಿದ್ದೇವೆ ಹಿಂದೆ ಇದೇ ಸದನದಲ್ಲಿ ಪ್ರಶ್ನೋತ್ತರವೇಳೆ ನಿಗದಿತ ಅವಧಿಗಿಂತ 15.20 ನಿಮಿಷಗಳು ಮುಂದುವರಿದಿದೆ. ಆ ರೂಢಿಯನ್ನು ನಿಲ್ಲಿಸಬೇಕೆನ್ನುವ ದೃಷ್ಟಿಯಿಂದ ಹೊಸ ನಿಯಮಾವಳಿಗಳನ್ನು ಮಾಡಿಕೊಂಡಿದ್ದೇವೆ. ಲೋಕ ಸಭೆಯಲ್ಲಿ ನಡೆಯುವ ಕಾರ್ಯಕಲಾಪಗಳನ್ನು ನೋಡಿದರೆ ಗೊತ್ತಾಗುತ್ತದೆ. ಅಲ್ಲಿ ಪ್ರಶ್ನೋತ್ತರ ವೇಳೆ 1ಗಂಟೆ ಮುಗಿದ ಕೂಡಲೇ ಮುಂದಿನ ವಿಷಯಗಳಿಗೆ ಹೋಗುತ್ತಾರೆ ಮಹಾರಾಷ್ಟ್ರ ವಿಧಾನ ಸಭೆಯಲ್ಲೂ ಕೂಡ ಪ್ರಶ್ನೋತ್ತರವೇಳೆಯನ್ನು ಒಂದು ನಿಮಿಷ ಕೂಡ ಮುಂದುವರಿಸುವುದಿಲ್ಲ. ಅನೇಕ ಸದಸ್ಯರ ಪ್ರಶ್ನೆಗಳಿಗೆ ಉತ್ತರ ದೊರೆಯದಿದ್ದರೆ ಹೇಗೆ ಅಂದರೆ, ಸಪ್ಲಿಮೆಂಟರಿ ಪ್ರಶ್ನೆಗಳನ್ನ ಕೇಳುವಾಗ ಆದಷ್ಟು ಕಡಿಮೆ ಸಮಯವನ್ನು ತೆಗೆದುಕೊಳ್ಳಬೇಕು. ಇದಕ್ಕೆ ಎಲ್ಲಾ ಸದಸ್ಯರ ಸಹಕಾರ ಬೇಕು. ನಾವು ಕಡ್ಡಾಯವಾಗಿ ಹೊಸ ನಿಯಮವನ್ನು ಪಾಲಿಸಬೇಕಾದರೆ ಬದಲಾವಣೆ ಮಾಡುವ ಅವಶ್ಯಕತೆ ಇಲ್ಲ. ಲೋಕಸಭೆ ಮತ್ತು ಇನ್ನಿತರ ರಾಜ್ಯ ವಿಧಾನಸಭೆಗಳಲ್ಲಿ ಅದೇರೀತಿ ನಡೆದುಕೊಂಡು ಬರುತ್ತಿದ್ದಾರೆ. ನಾವು ಕೂಡ ಅದನ್ನು ಫಾಲೋ ಮಾಡಬೇಕು.

ಶ್ರೀ ಪಿ. ರಾಂದೇವ್ —ನಾವು ಲೋಕಸಭೆಯ ಮಟ್ಟಕ್ಕೆ ಹೋಲಿಸುವುದು ಬೇಡ. ಹಾಗಾದರೆ ಲೋಕಸಭೆಯಲ್ಲಿ ಸಂತಾಪಸೂಚನೆ ಮಾಡುವಾಗ ಒಂದು ದಿವಸ ತೆಗೆದುಕೊಳ್ಳುತ್ತಾರೆ. ನಾವು ಎಲ್ಲ ವನ್ನೂ ಲೋಕಸಭೆಯ ಮಟ್ಟಕ್ಕೆ ಮಾಡುತ್ತಿದ್ದೇವೆಯೇ ? ಇದು ವಿಧಾನಸಭೆ. ಲೋಕಸಭೆಯಲ್ಲ. ಲೋಪದೋಷಗಳೇನಿವೆ ಅವುಗಳನ್ನು ತಿದ್ದಬೇಕು. ಸದಸ್ಯರ ಹಕ್ಕುಗಳು ಮೊಟಕು ಆಗಬಾರದು.

ಶ್ರೀ ಎಂ. ವೀರಪ್ಪಮೊಯಿಲಿ —ನಿನ್ನೆ ಮತ್ತು ಇವತ್ತು ಹೊಸ ನಿಯಮಗಳನ್ನು ಪಾಲಿಸುವಾಗ ಸ್ವಲ್ಪ ಹೆಚ್ಚು ಕಡಿಮೆ ಆಗುತ್ತಿದೆ. ನಾವು ಏನೊಂದು ತೀರ್ಮಾನ ತೆಗೆದು ಕೊಂಡಿದ್ದೇವೆ ಅದನ್ನು ಪಾಲಿಸಬೇಕಾದ್ದು ಕೂಡ ಕರ್ತವ್ಯ ಇವೆ. ಸಾಮಾನ್ಯವಾಗಿ ಒಂದೊಂದು ಪ್ರಶ್ನೆಗೆ ಎಷ್ಟು ಸಮಯ ಬೇಕಾಗುತ್ತದೆ ಎನ್ನುವುದು ತಮ್ಮ ಅನುಭವದಲ್ಲಿದೆ. ಅದೇರೀತಿ ಯಾರ್ಯಾರು ಎಷ್ಟೆಷ್ಟು ಸಮಯ ತೆಗೆದುಕೊಳ್ಳುತ್ತಾರೆ ಎನ್ನುವುದು ಕೂಡ ಸದನದ ಅನುಭವದಲ್ಲಿದೆ. ಪ್ರಶ್ನೆಗೆ ಉತ್ತರ ಸಿಗದಿದ್ದರೆ ತೊಂದರೆಯಾಗುತ್ತದೆ. ಇಬ್ಬರು ಪ್ರಶ್ನೆಗಳನ್ನು ಹಾಕಿದಾಗ ಮತ್ತೊಬ್ಬರಿಗೆ ಉಪ ಪ್ರಶ್ನೆಗಳನ್ನು ಹಾಕಲಿಕ್ಕೆ ಅವಕಾಶ ಸಿಗಲಿಕ್ಕಿಲ್ಲ. ಪ್ರಶ್ನೆಗಳನ್ನು ಕೇಳಬೇಕೆಂದು ಸದಸ್ಯರು ತಯಾರಾಗಿ ಬಂದಿರುತ್ತಾರೆ. ಸಮಯ ಸಿಗದಿದ್ದಾಗ ಅವರ ಮನಸ್ಸಿಗೆ ನೋವಾಗುತ್ತದೆ. ಮಾನ್ಯ ಸದಸ್ಯರಾದ ರಾಂದೇವ್ ರವರು ಪಾಪ ಅವರಿಗೆ ಯಾರೂ ಕೇಳುವವರು ಇಲ್ಲ್ಲ; ಅಂತಹವರೇ ನಮಗೆ ರಕ್ಷಣೆ ಕೊಡಿ ಎಂದು ಕೇಳುವಾಗ ಅವರ ರಕ್ಷಣೆಗೆ ಹೋಗಬೇಕಾಗಿದೆ.

ಶ್ರೀ ಎ. ಲಕ್ಷ್ಮೀಸಾಗರ್.— ಅವರಿಗೆ ಯಾರೂ ಇಲ್ಲ್ಲಾ, ನನಗೂ ಯಾರೂ ಇಲ್ಲ್ಲಾ. ಮನೆಯವರನ್ನು ಬಿಟ್ಟು ನಿಮಗೆ ಎಷ್ಟು ಜನರಿದ್ದಾರೆಂಬುದನ್ನು ಹೇಳಿ

ಶ್ರೀ ಎಸ್ ಬಂಗಾರಪ್ಪ.— ವಿರೋಧಪಕ್ಷದ ನಾಯಕರು ಮಾತನಾಡುವಾಗ ಹೇಳಿದರು ಮಾನ್ಯ ರಾಂದೇವ್‌ರವರಿಗೆ ಯಾರೂ ಕೇಳುವವರು ಇಲ್ಲವೆಂದು, ಆದರೆ ಮಾನ್ಯ ಲಕ್ಷ್ಮೀ ಸಾಗರ್‌ರವರಿಗೆ ಕೇಳುವವರು ಯಾರಿದ್ದಾರೆ?.

ಶ್ರೀ ಎ ಲಕ್ಷ್ಮೀ ಸಾಗರ್.— ನಮ್ಮನ್ನು ಕೇಳತಕ್ಕ ಹಕ್ಕು ಈ ಮನೆಯ ಸದಸ್ಯರಿಗೆ ಇದೆ, ಅದೇರೀತಿ ದೇಶದ ಪ್ರಜೆಗಳಿಗೆ ಕೇಳತಕ್ಕ ಅಧಿಕಾರವಿದೆ.

ಶ್ರೀ ವಿಂ. ವೀರಪ್ಪ ಮೊಯಿಲಿ.— ತಾವು ಸರಾಸರಿ ಇಂತಿಷ್ಟು ಪ್ರಶ್ನೆಗಳನ್ನು ಹಾಕತಕ್ಕ ವ್ಯವಸ್ಥೆ ಮಾಡಿ. ಆ ರೀತಿಯ ವಿಪರ್ಯಾಟು ಆಗುವವರೆಗೆ ಪ್ರಮುಖವಾದ ಪ್ರಶ್ನೆಗಳಿಗೆ ಉತ್ತರ ಪಡೆಯಲಿಕ್ಕೆ ಅವಕಾಶ ಮಾಡಿಕೊಡಿ. ಸಾಕಷ್ಟು ಪರಿಶ್ರಮಪಟ್ಟು ಸದಸ್ಯರುಗಳು ಅಭ್ಯಾಸ ಮಾಡಿಕೊಂಡು ಬಂದಿರುತ್ತಾರೆ. ಅಂತಪವರಿಗೆ ಅವಕಾಶ ಮಾಡಿಕೊಡಿ. ಇದರ ಬಗ್ಗೆ ಒಂದು ತೀರ್ಮಾನ ತೆಗೆದುಕೊಳ್ಳುವವರೆಗೂ ಅವಕಾಶ ಮಾಡಿಕೊಡಿ. ಪ್ರತಿದಿನ ೩-೪ ಪ್ರಶ್ನೆಗಳು ಉಳಿದುಕೊಂಡು ಬಿಡುತ್ತವೆ. ಪ್ರಶ್ನೆಗಳನ್ನು ಹಾಕಿ ಉತ್ತರ ಸಿಗಲಿಲ್ಲ ಅಂದರೆ ಸದಸ್ಯರಿಗೆ ಬೇಸರವಾಗುತ್ತದೆ ಅವರಿಗೆ ನೋವಾಗುತ್ತದೆ. ಪ್ರತಿ ದಿವಸ ಸ್ವಲ್ಪ ಸಮಯ ದಯಪಾಲಿಸಿದರೆ ಎಲ್ಲರಿಗೂ ನೆಮ್ಮದಿಯಾಗುತ್ತದೆಂದು ವಿನಂತಿ ಮಾಡಿಕೊಳ್ಳುತ್ತೇನೆ.

MR. SPEAKER.-- Sri Krishnan has read Rule 37:

> "Unless the Speaker otherwise directs the first Hour of every day of sitting shall be available for the asking and answering of questions"

So, the interpretation of the whole thing is unless the Speaker otheswise directs the question hour is specified and confined itself to the hour, not beyond the hour. I have no powers so far as the particular hour is concerned.

SRI M. S. KRISHNAN.— Is there any precedent as to whether it has been interpreted in the manner in which you are seeking to interpret ? Any interpretation that is made by the Speaker has always to be made in favour of the Members in order to see that more and more facility is provided.

ಅಧ್ಯಕ್ಷರು.-- ೨೦ ಪ್ರಶ್ನೆಗಳನ್ನು ಹಾಕಿದರೆ, ೨೦ ಪ್ರಶ್ನೆಗಳಿಗೂ ಉತ್ತರ ತೆಗೆದುಕೊಳ್ಳಬಹುದು. ಕೇವಲ ಸಾರಿ ಏನಾಗುತ್ತದೆಂದರೆ, ಜಾಸ್ತಿ ಸಮಯವನ್ನು ತೆಗೆದುಕೊಳ್ಳುತ್ತಾರೆ. ಮಾನ್ಯ ಬೈರಪ್ಪಾಜಿಯವರು ತಮ್ಮ ಪ್ರಶ್ನೆಗೆ ೧೫ ನಿಮಿತ ತೆಗೆದುಕೊಳ್ಳುತ್ತಾರೆ. ಹೀಗೆ ಸಮಯ ತೆಗೆದುಕೊಳ್ಳುವುದರಿಂದ ಬೇರೆ ಪ್ರಶ್ನೆಗಳಿಗೆ ಸಮಯಾವಕಾಶವಿಲ್ಲದೆ ಲ್ಯಾಪ್ಸ್ ಆಗುತ್ತವೆ. ಮಾನ್ಯ ಪಂಪಾಪತಿಯವರ ಪ್ರಶ್ನೆನ್ನೆ ಕೂಡ ಲ್ಯಾಪ್ಸ್ ಆಯಿತು ಇವತ್ತು ಕೂಡ ಹಾಗೆಯೇ ಆಯಿತು. ನಾವು ಇಲ್ಲಿ ಇತಿಮಿತಿಯೊಳಗೆ ಕೆಲಸ ಮಾಡುವಾಗ ಒಮ್ಮೆ ೧ ನಿಮಿಷ ಹೆಚ್ಚು ಮಾಡಿದರೂ ಕೂಡ ಇದು ಏನಾಗುತ್ತದೆಂದರೆ ೫ ನಿಮಿಷ, ೧೦ ನಿಮಿಷ, ೧೫ ನಿಮಿಷ ಏತಕ್ಕೆ ಮುಂದೆ ಹೋಗಬಾರದು ಎನ್ನುವ ಪ್ರಶ್ನೆ ಬರುತ್ತದೆ. ಈಗಿರತಕ್ಕ ಪ್ರಶ್ನೆಗಳಿಗೆ ಎಷ್ಟು ಸಮಯ ಕೊಡಬಹುದು ಎನ್ನುವುದನ್ನು ನಾನೊಂದು ಪಟ್ಟಿ ತಯಾರು ಮಾಡಿಕೊಂಡು ಬಂದಿದ್ದೇ. ಮಾನ್ಯ ಬೈರಪ್ಪಾಜಿಯವರ ಪ್ರಶ್ನೆಗೆ ೭ ನಿಮಿಷ ಕೊಡಬಹುದು ಎಂದು ಗುರುತು ಹಾಕಿಕೊಂಡು ಬಂದಿದ್ದೆ. ಆದರೆ ಅವರು ೧೫ ನಿಮಿಷ ತೆಗೆದುಕೊಂಡರು. ಉಪ ಪ್ರಶ್ನೆಗಳಿಗೆ ಸಮಯ ಹೋಗುತ್ತದೆ. ಎಷ್ಟು ಪ್ರಶ್ನೆಗಳನ್ನು ಹಾಕಬೇಕು, ಎಷ್ಟು ಸಮಯ ತೆಗೆದುಕೊಳ್ಳಬೇಕು ಎನ್ನುವುದು ನನ್ನ ತೀರ್ಮಾನವಲ್ಲ. ಈ ಸದನ ತೀರ್ಮಾನ ಮಾಡಿದ್ದು ಅಲ್ಲ. ಪ್ರಮುಖವಾದ ಪ್ರಶ್ನೆಗಳು ಇದ್ದರೆ ಮೊದಲೇ ಮಂತ್ರಿಗಳಿಗೆ ಪತ್ರ ಬರೆದು ರೂಲ್ ೫೮ಕ್ಕೆ ಕನ್‌ವರ್ಟ್ ಮಾಡುವುದಕ್ಕೆ ಅವಕಾಶವಿದೆ. ಮಹತ್ವವಾದ ಪ್ರಶ್ನೆಗಳು ಇದ್ದರೆ ಮಂತ್ರಿಗಳಿಗೆ ಪತ್ರ ಬರೆದು ಕೇಳಿಕೊಂಡರೆ ವಿಶೇಷವಾಗಿ ತೆಗೆದುಕೊಳ್ಳಬಹುದು.

ಶ್ರೀ ಪಂಪಾಪತಿ.-- ನಾವು ಕಳುಹಿಸುವ ಪ್ರಶ್ನೆಗಳಿಗೆ ಮಹತ್ವ ಇಲ್ಲದಿದ್ದರೆ ನಾವು ಕಳುಹಿಸುವ ಅವಶ್ಯಕತೆ ಇಲ್ಲ.

ಅಧ್ಯಕ್ಷರು.– ಮಂತ್ರಿಗಳಿಗೆ ಪತ್ರ ಬರೆದಿದ್ದಾರೆ. Minister reprents to the Speaker that the subject matter of the question is one of the subjects of public interest or the Member represents to the Speaker that the question is of public interest and the Minister indicates his willingness to answer the question on a rare occasion the Question Hour may collapse before time,' ಇದು ಇದ್ದರೂ ಕೂಡ ಒಂದೊಂದು ಸಲ ಪ್ರಶ್ನೆಗಳು ೧ ಗಂಟೆಗಿಂತ ಮುಂಚೆ ಮುಗಿದು ಹೋಗತಕ್ಕ ಸಂದರ್ಭವುಂಟು.

ಇದರ ಬಗ್ಗೆ ನಿರ್ವಾಹಕವಿಲ್ಲದೇ ಮಾಡಬೇಕೇ ವಿನಾ, ದಯವಿಟ್ಟು ಈ ವಿಚಾರದಲ್ಲಿ ತಾವುಗಳು ಏನಾ ಒಂದು ನಿರ್ಣಯ ಕೊಟ್ಟಿದ್ದೀರಿ ಅದಕ್ಕೆ ನಾನೂ ಸಹ ಬದ್ಧನಾಗಿದ್ದೇನೆ. ಇದು ಅತ್ಯಂತ ಪ್ರಮುಖವಾದ ಪ್ರಶ್ನೆ. ಕಳೆದು ಹೋಯಿತಲ್ಲವೆ ಇದಕ್ಕೆ ಮಾನ್ಯ ಮಂತ್ರಿಗಳಿಂದ ಉತ್ತರ ಸಿಗುವುದಕ್ಕೆ ಸಾಧ್ಯವಾಗಲಿಲ್ಲಾ ಎನ್ನುವ ಕಳಕಳಿ ನನಗೂ ಇದೆ. ಅದಕ್ಕೆ ನಾನೂ ಸಹ ಪಾಲುಗಾರನಾಗಿದ್ದೇನೆ. ಆದುದರಿಂದ ಮುಂದಿನ ಬಿಸಿನೆಸ್ ಅಡ್ವೈಸರಿ ಕಮಿಟಿ ಮೀಟಿಂಗ್‌ನಲ್ಲಿ ಈ ವಿಷಯವನ್ನು ತೆಗೆದುಕೊಂಡು ಇದನ್ನು ಮುಗಿಸೋಣ.

ಶ್ರೀ ಪಂಪಾಪತಿ.– ಸ್ವಾಮಿ, ಈಗಾಗಲೇ ೨೦ ನಿಮಿಷ ಕಳೆದು ಹೋಯಿತು. ಇಷ್ಟು ಹೊತ್ತಿಗೆ ಅವನ್ನೆಲ್ಲಾ ಮುಗಿಸಬಹುದಾಗಿತ್ತು.

ಚುಕ್ಕೆ ಗುರುತ್ತಿಲ್ಲದ ಪ್ರಶ್ನೆಗಳು ಮತ್ತು ಲಿಖಿತ ಉತ್ತರಗಳು

(ನಗರಾಡಳಿತ ನಿರ್ದೇಶನಾಲಯ ರಚನೆ)

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳು).— ಲಿಖಿತ ಮೂಲಕ ಉತ್ತರಿಸಿದ ಪ್ರಶ್ನೆಗಳ ಎರಡನೇ ಪಟ್ಟಿಯನ್ನು ಸಭೆಯ ಮುಂದಿಡುತ್ತೇನೆ.

ಸಂಖ್ಯೆ ೧೨ (೩) (೪೭) ವಿ. ಎಸ್. ಆಚಾರ್ಯ (ಉಡುಪಿ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಬಲ್ಲರೇ ?.

ಅ) ರಾಜ್ಯದಲ್ಲಿ ನಗರಸಭೆ ಹಾಗೂ ಪುರಸಭೆಗಳ ಆಡಳಿತವನ್ನು ಹೆಚ್ಚು ದಕ್ಷಗೊಳಿಸಲು ಯೋಗ್ಯ ಉಸ್ತುವಾರಿಗಾಗಿ ನಗರಾಡಳಿತ ನಿರ್ದೇಶನಾಲಯವನ್ನು ರಚಿಸುವ ವಿಚಾರ ಸರಕಾರಕ್ಕಿದೆಯೆ:

ಆ) ಹಾಗಿದ್ದಲ್ಲಿ ಈ ಬಗ್ಗೆ ಕೈಗೊಂಡ ಕ್ರಮವೇನು?

ಶ್ರೀ ಎಂ. ಚಂದ್ರಶೇಖರ್ (ಮಾನ್ಯ ನಗರಾಭಿವೃದ್ಧಿ ಸಚಿವರು).—

ಅ) ಹೌದು.

ಆ) ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ವಿಷಯ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾಜಿ ಭೂ ಮಾಲಿಕರಿಗೆ ಪರಿಹಾರ.

ಪ್ರ ೧೩ (೪೯) ಡಾ॥ ವಿ. ಎಸ್. ಆಚಾರ್ಯ (ಉಡುಪಿ).—ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ

ಅ) ದಕ್ಷಿಣ ಕನ್ನಡ ಜಿಲ್ಲೆಯ ಮಾಜಿ ಭೂ ಮಾಲಿಕರಿಗೆ ಪರಿಹಾರ ನೀಡುವಾಗ ಕಿರುಕುಳ ಹಾಗೂ ಕಡ್ಡಾಯ ಶೇ. ಹತ್ತರಷ್ಟು ಲಂಚವನ್ನು ಭೂ ನ್ಯಾಯ ಮಂಡಳಿಯ ಸಿಬ್ಬಂದಿಯವರು ಕೇಳುತ್ತಿರುವುದು ಸರಕಾರದ ಗಮನಕ್ಕೆ ಒಂದಿಯೇ?

ಆ) ಅಂತಹ ಅಧಿಕಾರಿಗಳ ವಿರುದ್ಧ ಸರಕಾರದವರು ಎಚ್ಚರಿಕೆಯ ಕ್ರಮವನ್ನು ಕೈಕೊಂಡ ಕ್ರಮಗಳೇನು?